


ನೆರೆಮನೆಯಲ್ಲೊಂದು ಅಸಹಜ ಮೌನ ಆವರಿಸಿದೆಯೆಂದು ನಳಿನಾಕ್ಷಿಯ ಅಂತರಂಗ ಗಮನಿಸಿದರೂ ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲು ಹೋಗಲಿಲ್ಲ ನಳಿನಾಕ್ಷಿ. ಗಂಟೆ ಹನ್ನೊಂದಾಗುವವರೆಗೆ ಅವಳ ಕೆಲಸವೇ ಅವಳಿಗೆ ಹಾಸಿ ಹೊಚ್ಚುವಷ್ಟಿರುತ್ತದೆ. ಗಂಡ ಆಫೀಸಿಗೆ, ಮಕ್ಕಳು ಸ್ಕೂಲಿಗೆ ಹೊರಟು ಹೋದ ಮೇಲೆ ಒಂದಿಷ್ಟು ವಿರಾಮ. ಒಂದು ಕಪ್ ಬಿಸಿ ಕಾಫಿ ಹೀರುತ್ತಾ, ಬೆಳಗಿನ ಪೇಪರ್ ಮೇಲೆ ಕಣ್ಣಾಡಿಸುತ್ತಾ 'ಅಯ್ಯಬ್ಬಾ...' ಎಂದು ಬೆನ್ನುಕೋಲು ನೆಟ್ಟಗೆ ಮಾಡಿಕೊಳ್ಳುವ ಸಮಯ ಅದು. ನೆರೆಮನೆಯಿಂದ ಇಷ್ಟರಲ್ಲಾಗಲೇ ಕೇಳಿಸಿರಬೇಕಿತ್ತು ಕುಕ್ಕರ್ ಸೀಟಿ. ಗರ್ರೆನ್ನುವ ಮಿಕ್ಸಿಯ ಸದ್ದು. ದಿನಾ ಬೆಳಗಿನ ತಿಂಡಿ ಮಾಡಿಕೊಳ್ಳುವ ಅಭ್ಯಾಸವಿಲ್ಲ ವೇದಮ್ಮನಿಗೆ. ಹತ್ತೂವರೆ, ಹನ್ನೊಂದಕ್ಕೆ ಊಟ ಮಾಡಿದರೆ ಮತ್ತೆ ರಾತ್ರಿಯ ಊಟದವರೆಗೆ ಬೇಕೆಂದಾಗ ಕಾಫಿ. 'ಹೀಗೇ ಆದ್ರೆ ಕೈಯಾರೆ ಆರೋಗ್ಯ ಹಾಳು ಮಾಡ್ಕೋತೀರಿ ಆಂಟಿ. ಬೆಳಿಗ್ಗೆ ಏನಾದ್ರೂ ತಿಂಡಿ ತಿನ್ಬಾರ್ದಾ?' ಕಾಳಜಿ ತೋರಿಸುತ್ತಿದ್ದಳು ನಳಿನಾಕ್ಷಿ, ಕಾಂಪೌಂಡಿನ ಈಚೆ ನಿಂತು.

'ಅಯ್ಯೋ ಬೇಜಾರು ಕಣೇ. ಏನೋ ಒಂದು ಬೇಯಿಸ್ಕೊಂಡು ತಿಂದ್ರೆ ಸೈಯಪ್ಪಾ. ಜೀವ ಹಿಡ್ಕೊಂಡಿರೋಕೆ ಎಷ್ಟು ಬೇಕು?'

'ಹೋಗ್ಲಿ, ಮಗಳ ಮನೆಗಾದ್ರೂ ಹೋಗಿ ಇದ್ಬಿಡಿ. ಒಂಟಿಯಾಗಿರೋ ಕಷ್ಟ ತಪ್ಪುತ್ತೆ...'

'ಹೇಳೋಕೆ ಸುಲಭ. ಮಗಳೇ ಆಗಿರ್ಲಿ, ಪರಾಶ್ರಯ ಕಷ್ಟ ಕಣೇ. ಅವಳಿಗೆ ಅವಳದ್ದೇ ಸಂಸಾರ, ಅವಳದ್ದೇ ತಾಪತ್ರಯ ಇರುತ್ತೆ...'

'ಎಲ್ಲಾ ನೀವೇ ಅಂದಾಜು ಮಾಡ್ಕಂಬಿಡಿ ಆಯ್ತಾ? ಈ ಸಲ ಸುಷ್ಮಾ ಬರ್ಲಿ, ನಾನೇ ಕೇಳ್ತೀನಿ...'

'ಯಾರು ಕೇಳಿದ್ರೂ ಅಷ್ಟೇ. ಜೀವ ಇರೋವರೆಗೆ ಈ ಮನೆ ಬಿಡಲ್ಲ ನಾನು...'

ಬಲವಾಗಿ ಕಚ್ಚಿಕೊಂಡುಬಿಟ್ಟಿದ್ದರು ವೇದಮ್ಮ ತಮ್ಮ ಮನೆಗೆ. ಸಹಜ ಅನ್ನಿಸಿತ್ತು ನಳಿನಾಕ್ಷಿಗೆ. ನಿರ್ಜೀವ ವಸ್ತುಗಳೇ ಆಗಿರಲಿ, ವರ್ಷಾನುಗಟ್ಟಲೆಯ ಬಳಕೆಯಿಂದ ಜೀವನದ ಒಂದು ಭಾಗ ಎನ್ನುವಷ್ಟು ಅಭ್ಯಾಸವಾಗಿಬಿಟ್ಟಿರುತ್ತವೆ. ಓಡಾಡುವ ರಸ್ತೆಗಳು, ಹೋಗುವ ದೇವಸ್ಥಾನ, ಸಾಮಾನು ಕೊಳ್ಳುವ ದಿನಸಿ ಅಂಗಡಿ, ಕೊನೆಗೆ ಮನೆಗೆಲಸದವಳು, ಪೇಪರು ಹಾಕುವವನು, ತರಕಾರಿ ಗಾಡಿಯವನೂ ಕೂಡ ಬದುಕಿನ ಬಂಡಿಯೊಂದಿಗೆ ಕೊಂಡಿ ಜೋಡಿಸಿಕೊಂಡು ಬಿಟ್ಟಿರುತ್ತಾರೆ. ದಿನಾ ಬರುವವರು ಎರಡು ದಿನ ನಾಪತ್ತೆಯಾದರೆ ಮನದೊಳಗೆ ಏನೋ ಅರಕೆಯ ಭಾವನೆ. ಕೆಡುಕಿನ ಯೋಚನೆ. ಒಂದು ಸಲ ವೇದಮ್ಮ ಒಂದು ತಮಾಷಿಯ ವಿಷಯ ಹೇಳಿದ್ದರು. ಯಾವುದೋ ಹಬ್ಬದ ದಿನ ದೇವಸ್ಥಾನಕ್ಕೆ ಹೋದಾಗ ಎದುರು ಸಿಕ್ಕಿದವನೊಬ್ಬ ಪರಿಚಯದ ನಗು ನಕ್ಕು ನಮಸ್ಕಾರ ಹೇಳಿದನಂತೆ. ಎಷ್ಟು ತಲೆ ಕೆರೆದುಕೊಂಡರೂ ಅವನು ಯಾರು ಎಂದು ತಲೆಗೆ ಹೊಳೆಯುತ್ತಿಲ್ಲ. ತುಂಬಾ ನೋಡಿದವನು ಅನಿಸಿದರೂ ಗುರುತು ಪತ್ತೆಯಾಗುತ್ತಿಲ್ಲ. ಮಡ್ಡು ತಲೆಗೆ ಆಮೇಲೆ ಹೊಳೆಯಿತಂತೆ, ಅವನು ದಿನಾ ಮನೆಯೆದುರಿನ ರಸ್ತೆಯಲ್ಲಿ ತರಕಾರಿ ಗಾಡಿ ತಳ್ಳಿಕೊಂಡು ಬರುವವನು. ಅವನ ಹತ್ತಿರವೇ ವೇದಮ್ಮ ತರಕಾರಿ ಕೊಳ್ಳುವುದು. ವರ್ಷಾನುಗಟ್ಟಲೆಯಿಂದ ನೋಡಿದವನಾದರೂ ಅವನ ಗುರುತು ಪತ್ತೆಯಾಗಲಿಲ್ಲ ಅಂದರೆ?

'ವಯಸ್ಸಾಯ್ತು ನಿಂಗೆ. ಮರೆವು ಬರ್ತಿದೆ...' ಅಂದಿದ್ದರಂತೆ ವೇದಮ್ಮನ ಗಂಡ.

'ಅಯ್ಯೋ ಅದು ಹಾಗಲ್ಲ ಕಣೇ. ಮೊಣಕಾಲುದ್ದದ ಚಡ್ಡಿ, ಮೇಲೊಂದು ಟೀಶರ್ಟ್ ಹಾಕಿಕೊಂಡು ಬರುವವನು ಬಿಳಿ ಪಂಚೆ, ಶರಟು ಹಾಕಿಕೊಂಡು, ಲಕ್ಷಣವಾಗಿ ಎಣ್ಣೆ ಹಚ್ಚಿ ತಲೆ ಬಾಚಿ, ಜೊತೆಗೆ ಹಣೆ ಮೇಲೆ ವಿಭೂತಿ ಪಟ್ಟೇನೂ ಇತ್ತು ಕಣೇ. ಗುರುತು ಸಿಗು ಅಂದ್ರೆ ಸಿಗುತ್ತಾ? ನೀನೇ ಹೇಳು...' ನ್ಯಾಯ ಒಪ್ಪಿಸಿದ್ದರು ವೇದಮ್ಮ.

'ನಂಗೂ ಎಷ್ಟೋ ಸಲ ಹಾಗಾಗುತ್ತೆ ಆಂಟಿ. ಪೇಪರ್ ಹಾಕೋರು ದಾರೀಲಿ ಸಿಕ್ಕಿದ್ರೆ ಗುರುತು ಸಿಗೋದು ಕಷ್ಟ ಆಗುತ್ತೆ...' ಅವರ ಸಮಾಧಾನಕ್ಕೆ ಹೇಳಿದ್ದರೂ ಅದು ಸತ್ಯ ಕೂಡ ಅನಿಸಿತ್ತು ನಳಿನಾಕ್ಷಿಗೆ. ಅವರವರ ಕಸುಬಿನಿಂದ ಪರಿಚಯವಾದವರು ಅವರದಲ್ಲದ ಸ್ಥಳದಲ್ಲಿ, ಅವರದಲ್ಲದ ಸನ್ನಿವೇಶದಲ್ಲಿ ಥಟ್ಟನೆ ಎದುರಾದರೆ ಕೊಂಚ ಗಲಿಬಿಲಿಯಾಗುವುದು ಸಹಜ. ಅದರಲ್ಲೂ ವೇದಮ್ಮನಿಗೆ ಅರವತ್ತಾಗಿದ್ದಂತೂ ಸುಳ್ಳಲ್ಲವಲ್ಲ? ಮಿಡಲ್ ಸ್ಕೂಲಿಗೆ ಹೋಗುವ ಇಬ್ಬರು ಮೊಮ್ಮಕ್ಕಳಿದ್ದರು ವೇದಮ್ಮನಿಗೆ. ರಜಾ ಬಂದಾಗ ಅಜ್ಜನ ಮನೆಗೆ ಬಂದು ದಾಂಧಲೆ ಹಾಕುವ ಹುಡುಗರು. ಟೀವಿಯ ಸದ್ದು ಬಿಟ್ಟರೆ ನಿಶ್ಶಬ್ದದಲ್ಲಿ ಅದ್ದಿಟ್ಟಂತಹ ಮನೆಯಲ್ಲಿ ಆ ಹುಡುಗರು ಬಂದಾಗ ಗೌಜೋ ಗೌಜು. ಎಣ್ಣೆಯಲ್ಲಿ ಕರಿದ ತಿಂಡಿಯ ಘಮಲು ಕಿಟಕಿಯ ಮುಖಾಂತರ ನಳಿನಾಕ್ಷಿಯ ಮನೆಯೊಳಗೂ ನುಸುಳಿ ವಾಸನೆಯಿಂದಲೇ ಅದು ಯಾವ ತಿಂಡಿ ಇರಬಹುದು ಎಂದು ಊಹಿಸಿ ಬಿಡುತ್ತಿದ್ದಳು ನಳಿನಾಕ್ಷಿ. ಕೆಲವೊಮ್ಮೆ ಇವರ ಮನೆಗೂ ಬರುತ್ತಿತ್ತು ಪಾಲು.

'ಅಜ್ಜಿ ಕೊಟ್ಬಾ ಅಂದ್ರು...' ಎನ್ನುತ್ತಾ ಮೊಮ್ಮಗನೊಬ್ಬ ತಟ್ಟೆ ತುಂಬಿದ ತಿಂಡಿ ತಲುಪಿಸಿ ಹೋಗುತ್ತಿದ್ದ. ಖಾಲಿ ತಟ್ಟೆ ಹಿಂದಿರುಗಿಸಲು ಮುಜುಗರವಾಗಿ ಒಂದಿಷ್ಟು ಹಣ್ಣುಹಂಪಲುಗಳನ್ನು ಹಾಕಿ ವಾಪಸ್ ಕೊಡುತ್ತಿದ್ದಳು ನಳಿನಾಕ್ಷಿ.

'ಇದೇನು ಲೇವಾದೇವಿ ವ್ಯವಹಾರ ಅಂದ್ಕಂಡಿದೀಯನೇ? ಮಕ್ಕಳಿಗೇಂತ ಚೂರು ಕೊಟ್ಟಿದ್ದಪ್ಪಾ...'

'ನಾನೂ ಮನೇಲಿ ಇದ್ದಿದ್ದನ್ನು ಕೊಟ್ಟಿದ್ದಪ್ಪಾ...' ಒಂದು ಬಿಳೀ ಸುಳ್ಳು.

'ಅತಿಯಾಯ್ತು ನಿಂದು...' ವೇದಮ್ಮ ಹೀಗೆ ಕೋಪಿಸಿಕೊಳ್ಳತೊಡಗಿದ ಮೇಲೆ ಖಾಲಿ ತಟ್ಟೆ ಹಿಂದಿರುಗಿಸುವುದು ಸಲೀಸಾಗಿಬಿಟ್ಟಿತ್ತು ನಳಿನಾಕ್ಷಿಗೆ.

ಬದುಕಿನ ಬಗ್ಗೆ ಎಷ್ಟೊಂದು ಹುಮ್ಮಸ್ಸು ವೇದಮ್ಮನಿಗೆ. ಕೆಲಸದವಳು ಮನೆ ಬಾಗಿಲಿನೆದುರು ಗುಡಿಸಿ ನೀರು ಹಾಕಿದರೂ ಸ್ವತಾ ರಂಗೋಲಿ ಹಾಕಬೇಕು. ದಿನಕ್ಕೊಂದು ರಂಗೋಲಿ ಬಿಡಿಸುವ ಅವರ ಕಲಾಕೌಶಲ್ಯ ಆಚೀಚಿನ ಮನೆಯವರಿಗೆ ಬೆರಗು. ನಳಿನಾಕ್ಷಿಯ ಮನೆಯ ಗೇಟಿನೆದುರು ಬಿಳೀ ಪೈಂಟಿನಲ್ಲಿ ದೊಡ್ಡ ರಂಗೋಲಿ ಬಿಡಿಸಿಕೊಟ್ಟಿದ್ದರು ವೇದಮ್ಮ. ಅವತ್ತಿನಿಂದ ಇವತ್ತಿನವರೆಗೂ ಅದನ್ನು ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬಂದಿದ್ದಾಳೆ ನಳಿನಾಕ್ಷಿ, ಗೆರೆ ಅಳಿಸಿದಲ್ಲಿ ಮತ್ತೆ ಹೊಸ ಗೆರೆ ಎಳೆಯುತ್ತಾ. ವೇದಮ್ಮನ ಗಂಡ ಕಡಿಮೆಯೇ? ಸುಮ್ಮನೆ ಕೂರುವ ಜಾಯಮಾನ ಅಲ್ಲವೇ ಅಲ್ಲ. ಒಂದು ಬಕೆಟ್ಟಿನಲ್ಲಿ ನೀರಿಟ್ಟುಕೊಂಡು ಕಿಟಕಿ, ಬಾಗಿಲಿನ ದೂಳು ವರೆಸುತ್ತಿರುತ್ತಾರೆ. ಅಂಗಳದ ಕಿರುಜಾಗದಲ್ಲಿ ಬೆಳೆಸಿದ ಹೂಗಿಡಗಳಿಗೆ ನೀರುಣಿಸುತ್ತಾ, ಕಳೆ ಕೀಳುತ್ತಾ, ತಂಪು ಹೊತ್ತಲ್ಲಿ ಹೊರಗೊಂದು ಕುರ್ಚಿ ಹಾಕಿಕೊಂಡು ಪೇಪರೋ, ಪುಸ್ತಕವೋ ಓದುತ್ತಾ, ಸಂಜೆ ಗಂಡ ಹೆಂಡಿರಿಬ್ಬರೂ ಒಂದರ್ಧ ಗಂಟೆ ವಾಕಿಂಗ್ ಹೋಗಿ ಬರುತ್ತಾರೆ. ಅಂಕಲ್‌ಗೆ ಹೋಲಿಸಿದರೆ ವೇದಮ್ಮನಿಗೆ ಶೋಕಿ ಜಾಸ್ತಿ. ಒಂದೂ ಬಿಳಿಗೂದಲು ಇಣುಕದಂತೆ ಡೈ ಮಾಡಿಕೊಂಡ ತಲೆಗೂದಲು, ನಾಜೂಕಾಗಿ ಉಡುವ ಬಣ್ಣ ಬಣ್ಣದ ಸೀರೆಗಳು, ತುರುಬಿಗೆ ಮಲ್ಲಿಗೆ ದಂಡೆ, ಹೊಸ ಜೋಡಿ ಸುಳ್ಳು, ಇವರು ಸತ್ಯ ಅನ್ನುವಂತೆ ಸುತ್ತಾಡಲು ಹೊರಡುವವರನ್ನು ಕಂಡು ನಳಿನಾಕ್ಷಿ ಅವರ ಜೀವನ ಪ್ರೀತಿಗೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದುದಿತ್ತು. ನೋಡಿದವರು ಅಹುದಹುದೆನ್ನುವಂತಾ ಸುಖಜೀವನ ದಂಪತಿಯದು. ಇರುವ ಒಬ್ಬ ಮಗಳಿಗೆ ಮದುವೆ ಮಾಡಿ, ಬಾಣಂತನ ಮಾಡಿ ಜವಾಬ್ದಾರಿ ಕಳೆದುಕೊಂಡಿದ್ದಾರೆ. ಇರಲು ಸ್ವಂತ ಮನೆ ಉಂಟು. ಖರ್ಚಿಗೆ ಕೈ ತುಂಬಾ ಬರುವ ನಿವೃತ್ತಿ ವೇತನ ಉಂಟು. ಮತ್ತೇನು?

* * *

ಆಗಿನ್ನೂ ರಾತ್ರಿಯ ಊಟ ಮುಗಿಸಿ ವೇದಮ್ಮನ ಗಂಡ ಟೀವಿಯ ಎದುರು ಕೂತಿದ್ದರಂತೆ. ವೇದಮ್ಮ ಜಾಹೀರಾತಿನ ನಡುವಿನ ಬಿಡುವಿನಲ್ಲಿ ಒಳ ಹೊರಗೆ ಓಡಾಡುತ್ತಾ ದಿನದ ಕೊನೆಯ ಕಂತಿನ ಬಾಕಿ ಕೆಲಸ ಮುಗಿಸುವುದರಲ್ಲಿದ್ದರಂತೆ. 'ಅಯ್ಯೋ, ಊಟ ಆದ ಮೇಲೆ ಗಂಡನಿಗೆ ಕೊಡಬೇಕಾದ ಶುಗರ್ ಮಾತ್ರೆ ಕೊಟ್ಟಿಲ್ಲ' ಅನ್ನುವುದು ಥಕ್ಕನೆ ನೆನಪಾಗಿ ನೀರಿನ ಲೋಟದೊಡನೆ ಮಾತ್ರೆ ಹಿಡಿದು ಬಂದರೆ ಗಂಡ ಕೂತಲ್ಲೇ ತಲೆ ಜೋಲಿಸಿ ವರಗಿದ್ದಾರೆ. ಹೀಗೂ ಬರುತ್ತದೆಯಾ ಸಾವು? ಸುಳಿವೇ ಕೊಡದೆ